# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301

OFFICE OF THE DEPUTY COMMISSIONER, UTTARA KANNADA DISTRICT, KARWAR, -581 301

ದೂರವಾಣಿ : / Telephone: 08382 226406, 226471 / 08382 226603 (Fax)

Email: dckarwar@gmail.com

Website: http://uttara kannada.nic.in


ನಂ:ಕಂಶಾ/ಸಿಬ್ಬಂದಿ(2)/ವಿವ-60/2018-19 ದಿನಾಂಕ: 17-10-2018

## ಅಧಿಕೃತ ಜ್ಞಾಪನ

**ವಿಷಯ:** ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ತಾತ್ಕಾಲಿಕ ಕಾಯ್ದಿರಿಸಿದ ಪಟ್ಟಿ ಪ್ರಕಟಿಸುವ ಕುರಿತು.

**ಉಲ್ಲೇಖ:** 1) ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿನಾಂಕ 17-07-2018.
2) ಈ ಕಾರ್ಯಾಲಯದ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ 03-09-2018 ಮತ್ತು 12-09-2018.

<<<>>>

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗ ಹುದ್ದೆಗಳಿಗೆ ನೇರ ನೇಮಕಾತಿ ಕುರಿತು ಉಲ್ಲೇಖ (1) ರಂತೆ ಅಧಿಸೂಚನೆ ಹೊರಡಿಸಿ ಆನ್‌ಲೈನ್ ಮುಖಾಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ನೇಮಕಾತಿ ಕುರಿತು 1:5 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನಾ ಪಟ್ಟಿಯನ್ನು ಉಲ್ಲೇಖ(2)ರಂತೆ ವೆಬ್‌ಸೈಟನಲ್ಲಿ ಪ್ರಕಟಿಸಲಾಗಿತ್ತು. ಮತ್ತು ದಿನಾಂಕ 25-09-2018 ರಂದು ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲನೆಗೆ ಕರೆಯಲಾಗಿತ್ತು.

ಸದ್ರಿ ಪರಿಶೀಲನಾ ಪಟ್ಟಿಗೆ (1:5) ಆಕ್ಷೇಪಣೆ ಸಲ್ಲಿಸಲು ದಿನಾಂಕ:20-09-2018ರ ವರೆಗೆ ಸಮಯವನ್ನು ನಿಗದಿಪಡಿಸಲಾಗಿತ್ತು. ಸದರಿ ಅವಧಿಯಲ್ಲಿ ಲಿಖಿತ ರೂಪದಲ್ಲಿ 4 ಆಕ್ಷೇಪಣೆ ಸ್ವೀಕೃತವಾಗಿದ್ದು ಸದರಿ ಆಕ್ಷೇಪಣೆಯನ್ನು ತಿರಸ್ಕರಿಸಲಾಗಿದೆ.

ದಿನಾಂಕ:25-09-2018 ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆಸಲಾದ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ 1) **ತಾತ್ಕಾಲಿಕ ಆಯ್ಕೆ ಪಟ್ಟಿ** 2) ತಾತ್ಕಾಲಿಕ ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿ ಮತ್ತು 3) ಅಭ್ಯರ್ಥಿಗಳ ತಿರಸ್ಕೃತ ಪಟ್ಟಿ ಸಿದ್ಧಪಡಿಸಿ ಜಿಲ್ಲಾ ವೈಬ್‌ಸೈಟ http://uttarakannada.nic.in ನಲ್ಲಿ ಪ್ರಚಾರಪಡಿಸಲಾಗಿದೆ.

2ಎ-ಅಂಗವಿಕಲ ಹುದ್ದೆಗೆ (Mentally Retarded) ಅಭ್ಯರ್ಥಿಯನ್ನು ಆಯ್ಕೆ ಮಾಡಲು ನಿಯಮಾನುಸಾರ ಅವಕಾಶ ಇಲ್ಲದೇ ಇರುವುದರಿಂದ 2ಎ-ಅಂಗವಿಕಲ ಪರಿಶೀಲನೆ ಪಟ್ಟಿಯಲ್ಲಿ ಅ.ನಂ.1 ರಲ್ಲಿಯ ಅಭ್ಯರ್ಥಿಯನ್ನು ಕೈಬಿಡಲಾಗಿದೆ. ಮತ್ತು ಪರಿಶೀಲನಾ ಸಮಯದಲ್ಲಿ ಸಾಮಾನ್ಯ (ಮಾಜಿ ಸೈನಿಕ) ಹುದ್ದೆಗೆ ಅರ್ಹ ಅಭ್ಯರ್ಥಿ ಲಭ್ಯವಾಗದೇ ಇದ್ದುದರಿಂದ ಸಾಮಾನ್ಯ-(ಮಾಜಿ ಸೈನಿಕ) ಹುದ್ದೆಗೆ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿದೆ, ಸದರಿ ಪರಿಶೀಲನಾ ಪಟ್ಟಿಯಲ್ಲಿಯ ಅಭ್ಯರ್ಥಿಗಳು ದಿನಾಂಕ:03-11-2018 ರಂದು ಪರಿಶೀಲನೆಗೆ ಹಾಜರಾಗಲು ಸೂಚಿಸಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿ/ ತಾತ್ಕಾಲಿಕ ಕಾಯ್ದಿರಿಸಿದ ಆಯ್ಕೆ ಪಟ್ಟಿ ಮತ್ತು ವಿವಿಧ ಕಾರಣಗಳಿಂದ ತಿರಸ್ಕರಿಸಿದ ಪಟ್ಟಿಯಿಂದ ಅಭ್ಯರ್ಥಿಗಳು ಯಾರಾದರೂ ಭಾದಿತರಾದಲ್ಲಿ ದಿನಾಂಕ:02-11-2018 ರ ಸಂಜೆ 5-30 ಗಂಟೆ ಒಳಗಾಗಿ ತಮ್ಮ ಆಕ್ಷೇಪಣೆಗಳೆನಾದರೂ ಇದ್ದಲ್ಲಿ ಲಿಖಿತ ರೂಪದಲ್ಲಿ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಕಾರವಾರರವರಿಗೆ ಸಲ್ಲಿಸತಕ್ಕದ್ದು. ಇ-ಮೇಲ್ ಮುಖಾಂತರ ಸಲ್ಲಿಸಲಾಗುವ ಮತ್ತು ನಿಗದಿತ ಅವಧಿಯ ನಂತರ ಸ್ವೀಕರಿಸಲಾಗುವ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗದು. ಆಕ್ಷೇಪಣೆ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸ, ದೂರವಾಣಿ/ ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿ (ಹೊಂದಿದ್ದಲ್ಲಿ) ವಿವರವನ್ನು ತಪ್ಪದೇ ಸಲ್ಲಿಸಬೇಕು.

17/10

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ
ಉತ್ತರ ಕನ್ನಡ ಜಿಲ್ಲೆ ಕಾರವಾರ.

**ಪ್ರತಿ:**

1) ಡಿಸ್ಟ್ರೀಕ್ಟ್ ಇನ್‌ಪೊರಮೆಟಿಕ್ ಅಧಿಕಾರಿ, ಎನ್‌ಐಸಿ ಕಾರವಾರ

2/- ಲಗ್ತ ಇಟ್ಟ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ತಾತ್ಕಾಲಿಕ ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿ ಹಾಗೂ ಅಭ್ಯರ್ಥಿಗಳ ತಿರಸ್ಕೃತ ಪಟ್ಟಿಯನ್ನು ತಕ್ಷಣವೇ ಜಿಲ್ಲಾ ವೆಬ್‌ಸೈಟನಲ್ಲಿ ಪ್ರಚಾರ ಪಡಿಸಲು ಕೋರಿದೆ.

2) ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.